ದಿನಾಂಕಃ **16.04.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಮಾನ್ಯ ಶ್ರೀ SRV ವಕೀಲರಿಂದಃ**

ನರಸಿಂಹಪ್ಪ ನನ್ನ ತಾತ. ಸದರಿ ನರಸಿಂಹಪ್ಪ ರವರ ತಂದೆಯ ಹೆಸರು ಸುಬ್ಬ @ ಸುಬ್ಬಪ್ಪ. ಸದರಿ ಸುಬ್ಬಪ್ಪನಿಗೆ ನರಸಿಂಹಪ್ಪ ಮತ್ತು ಮುತ್ಯಾಲಪ್ಪ ಎಂಬ ಇಬ್ಬರು ಮಕ್ಕಳು. ನರಸಿಂಹಪ್ಪನಿಗೆ ಮೂರು ಜನ ಮಕ್ಕಳು ಅವರು ಗಂಗಪ್ಪ, ನಡಪಿನರಸಯ್ಯ @ ದಾಸಪ್ಪ, ಚಿಕ್ಕನರಸಯ್ಯ @ ಚಿನ್ನನರಸಯ್ಯ. ಸುಬ್ಬಪ್ಪ ರವರಿಗೆ ಸರ್ವೆ ನಂ.**104/2, 135, 138/2, 159** ಗಳಲ್ಲಿ ಜಮೀನು ಇತ್ತು. ಸದರಿ ಆಸ್ತಿಗಳು ನಮ್ಮ ತಾತ ಸುಬ್ಬಪ್ಪ ರವರು ಸಂಪಾದನೆ ಮಾಡಿದ ಆಸ್ತಿಗಳಾಗಿರುತ್ತವೆ. ಸರ್ವೆ ನಂ.**125/4, 138/2** ಸಹ ನಮ್ಮ ತಾತ ಸುಬ್ಬಪ್ಪನ ಆಸ್ತಿ. ಅವುಗಳನ್ನು ಅವರು ಖರೀದಿ ಮಾಡಿದ್ದರು. ಯಾರಿಂದ ಖರೀದಿ ಮಾಡಿದ್ದರು ಎಂದು ಈಗ ಹೇಳಲು ಆಗುವುದಿಲ್ಲ. ಈ ಬಗ್ಗೆ ಕ್ರಯ ಪತ್ರ ಹಾಜರುಪಡಿಸಿರುತ್ತೇ.

ಸುಬ್ಬಪ್ಪ ರವರು ನನ್ನ ತಂದೆ ಚಿಕ್ಕವರಿರುವಾಗಲೇ ತೀರಿಕೊಂಡಿರುತ್ತಾರೆ. ಎಷ್ಟು ವರ್ಷಗಳು ಎಂದು ಹೇಳಲು ಆಗುವುದಿಲ್ಲ. ನರಸಿಂಹಪ್ಪ ಮತ್ತು ಮುತ್ಯಾಲಪ್ಪ **1954** ರಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ. ವಿಭಾಗ ಮಾಡಿಕೊಂಡ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇನೆ. ನರಸಿಂಹಪ್ಪ ರವರ ಮಕ್ಕಳು ಸಹ ವಿಭಾಗ ಮಾಡಿಕೊಂಡು ತಮ್ಮ ಭಾಗದ ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆ. ಸದರಿ ವಿಭಾಗ ಪತ್ರ ಹಾಜರಪಡಿಸಿಲ್ಲ. ವಿಭಾಗವನ್ನು ನೊಂದಣಿ ಮಾಡಿಸಿಕೊಂಡಿಲ್ಲ, ಆದರೆ ಖಾತೆ ಆಗಿರುತ್ತದೆ. ಈ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇನೆ.

ಸರ್ವೆ ನಂ.**129/2** ಇ ರಲ್ಲಿ ಗಂಗಪ್ಪ, ನಡಪಿನರಸಯ್ಯ @ ದಾಸಪ್ಪ, ಚಿಕ್ಕನರಸಯ್ಯ @ ಚಿನ್ನನರಸಯ್ಯ ರವರಿಗೆ ಆಸ್ತಿ ಬಂದಿರುತ್ತದೆ. ಸುಬ್ಬಪ್ಪ ನ ಮಗ ನರಸಿಂಹಪ್ಪ ರವರಿಗೆ ವಿಭಾಗದಲ್ಲಿ ಸರ್ವೆ ನಂ.**104/2, 138/2, 135, 159** ಬಂದಿರುತ್ತದೆ. ಈ ಬಗ್ಗೆ ಖಾತೆ ಮತ್ತು ಮ್ಯುಟೇಷನ್ ಹಾಜರುಪಡಿಸಿರುತ್ತೇನೆ. ಸರ್ವೆ ನಂ.**125/4** ರಲ್ಲಿ ಒಟ್ಟು **13** ಎಕರೆ **17** ಗುಂಟೆ ಜಮೀನು ಇರುತ್ತದೆ. ಸದರಿ ಸರ್ವೆ ನಂ. ನಲ್ಲಿ ಮುತ್ಯಾಲಪ್ಪ ಮತ್ತು ಅವರ ಮಕ್ಕಳಿಗೆ ಪೂರ್ವದಲ್ಲಿ ½ ಭಾಗ ಹಾಗೂ ನಮಗೆ ಪಶ್ಚಿಮದಲ್ಲಿ ½ ಭಾಗ ಬಂದಿರುತ್ತದೆ. ನರಸಿಂಹಪ್ಪ ಹಾಗೂ ಅವರ ಮಕ್ಕಳಿಗೆ **2** ಎಕರೆ **9** ಚಿಲ್ಲರೆ ಗುಂಟೆ ಬಂದಿರುತ್ತದೆ. ಅದರ ಪ್ರಕಾರ ಪಹಣಿ ನಮಗೆ ಬರುತ್ತಿತ್ತು. **1965** ರಿಂದ ನಮ್ಮ ದೊಡ್ಡಪ್ಪನ ಹೆಸರಿಗೆ ಖಾತೆ ಬರುತ್ತಿತ್ತು. ನನ್ನ ತಂದೆಯ ಹೆಸರಿಗೆ **1985** ರಿಂದ ಪಹಣಿ ಬಂದಿರುತ್ತದೆ. ಪಹಣಿಯಲ್ಲಿ ಒಟ್ಟಾಗಿ ಎಲ್ಲರ ಹೆಸರು ಬರುತ್ತಿದೆ. ನರಸಿಂಹಪ್ಪ ಹಾಗೂ ಅವರ ಮಕ್ಕಳಿಗೆ **2** ಎಕರೆ **9** ಚಿಲ್ಲರೆ ಗುಂಟೆ ಬಂದಿರುತ್ತದೆ ಎಂದು ತೋರಿಸಲು ಹಕ್ಕಿನ ದಾಖಲೆ ಹಾಜರುಪಡಿಸಿರುತ್ತೇನೆ. ನಾನು ನಮಗೆ ದಾವಾ ಜಮೀನು ಬಂದಿರುವುದಾಗಿ ತೋರಿಸಲು **Index** ಹಾಜರುಪಡಿಸಿರುತ್ತೇನೆ. ನರಸಿಂಹಪ್ಪ ಹಾಗೂ ಅವರ ಮಕ್ಕಳಿಗೆ **2** ಎಕರೆ **9** ಚಿಲ್ಲರೆ ಗುಂಟೆ ಸ್ವಾಧೀನ ಬಂದಿರುತ್ತದೆ ಎಂದು ತೋರಿಸಲು **1965** ರಿಂದ **RTC** ಹಾಜರುಪಡಿಸಿರುತ್ತೇನೆ. ನರಸಿಂಹಪ್ಪ ಹಾಗೂ ಅವರ ಮಕ್ಕಳಿಗೆ, ಮುತ್ಯಾಲಪ್ಪ ಹಾಗೂ ಅವರ ಮಕ್ಕಳಿಗೆ ಎಷ್ಟು ಜಮೀನು ಬಂದಿರುತ್ತದೆ ಎಂದು ತೋರಿಸಲು ಖಾತೆ ಹಾಜರುಪಡಿಸಿರುತ್ತೇನೆ. ನರಸಿಂಹಪ್ಪ ರವರ ಮಕ್ಕಳು ಎಂದು ತೋರಿಸಲು ವಂಶವೃಕ್ಷ ಹಾಜರುಪಡಿಸಿರುತ್ತೇನೆ. ಅದನ್ನು ಹೊರತುಪಡಿಸಿ ಬೇರೆ ದಾಖಲೆ ಹಾಜರುಪಡಿಸಿಲ್ಲ.

ನರಸಿಂಹಪ್ಪ ರವರಿಗೆ ಚಿಕ್ಕನರಸಯ್ಯ ಎಂಬ ಮಗ ಇರುವುದಿಲ್ಲ ಎಂದರೆ ಸರಿಯಲ್ಲ. ಚಿಕ್ಕನರಸಯ್ಯ ರವರಿಗೂ ದಾವಾ ಸ್ವತ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ

ಸರಿಯಲ್ಲ. ನಾಗರಾಜು ನನ್ನ ತಮ್ಮ, ಅವರು ಚಿಕ್ಕನರಸಯ್ಯ ರವರ **3** ನೇ ಮಗ. ವಂಶವೃಕ್ಷವನ್ನು ನಾಗರಾಜು ರವರ ಹೇಳಿಕೆ ಮೇರೆಗೆ ತಯಾರಿಸಿರುತ್ತಾರೆ ಎಂದರೆ ಸರಿ. ಆಸ್ತಿ ಕಬಳಿಸುವ ಉದ್ದೇಶದಿಂದ ವಂಶವೃಕ್ಷವನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನರಸಿಂಹಪ್ಪ ರವರಿಗೆ ಗಂಗಪ್ಪ ಮತ್ತು ನಡಿಪಿನರಸಯ್ಯ ಎಂಬ ಇಬ್ಬರೇ ಮಕ್ಕಳು ಎಂದರೆ ಸರಿಯಲ್ಲ.

ದಾವಾ ಸರ್ವೆ ನಂ.**125/4** ರಲ್ಲಿ ನರಸಿಂಹಪ್ಪ ರವರು ಮಾರಾಟ ಮಾಡಿಲ್ಲ. ಗಂಗಪ್ಪ ಮತ್ತು ನಡಿಪಿನರಸಯ್ಯ ರವರು ದಾವಾ ಸರ್ವೆ ನಂ.**125/4** ರಲ್ಲಿ ಗೋಡಣ್ಣ ಮತ್ತು ಗಂಗಪ್ಪ ರವರಿಗೆ ಮಾರಾಟ ಮಾಡಿರುತ್ತಾರೆ. ದಾವಾ ಸರ್ವೆ ನಂ.**125/4** ರಲ್ಲಿ ಗಂಗಪ್ಪ ಮತ್ತು ನಡಿಪಿನರಸಯ್ಯ ರವರಿಗೆ ಹಕ್ಕು ಇಲ್ಲ ಎಂದರೆ ಸರಿ, ಅವರು ತಮ್ಮ ಸಹೋದರನ ಆಸ್ತಿ ಹೊರತುಪಡಿಸಿ ತಮ್ಮ ಭಾಗದ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ. ಸರ್ವೆ ನಂ.**125/4** ರ ಪಹಣಿ ಗೋಡಣ್ಣ ಮತ್ತು ಗಂಗಪ್ಪ, ಆದಿ ರೆಡ್ಡಿ ರವರ ಹೆಸರಿನಲ್ಲಿ ಬರುತ್ತಿದೆ, ಆದರೆ ಅದು ತಪ್ಪಾಗಿ ಬರುತ್ತಿದೆ. ಸರ್ವೆ ನಂ.**125/4** ನಲ್ಲಿ ಆದಿ ರೆಡ್ಡಿ ತಂದೆ ಲಿಂಗಪ್ಪನ ಕಾಲದಿಂದಲೂ ಅವರ ಹೆಸರಿನಲ್ಲಿ ಪಹಣಿ ಬರುತ್ತಿದೆ ಎಂದರೆ ಅವರಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಆದಿ ರೆಡ್ಡಿ ರವರ ತಂದೆ ಕಾಲದಿಂದಲೂ ಹಾಗೂ ಈಗ ಅವರ ನಂತರ ಅವರ ಮಕ್ಕಳು ಸರ್ವೆ ನಂ.**125/4** ರ ಸ್ವಾಧೀನಾನುಭವದಲ್ಲಿ ಇದ್ದಾರೆ ಮತ್ತು ಪಹಣಿ **1965** ರಿಂದ ಬರುತ್ತಿದೆ ಎಂದರೆ ಸರಿಯಲ್ಲ, ನಾವು ಸ್ವಾಧೀನದಲ್ಲಿ ಇರುತ್ತೇವೆ, ಆದರೆ ಪಹಣಿ ಅವರ ಹೆಸರಿನಲ್ಲಿ ಬರುತ್ತಿದೆ. ನನ್ನ ತಂದೆಯ ಹೆಸರಿನಲ್ಲಿ ಇದ್ದ ಪಹಣಿಯನ್ನು ಹಾಜರುಪಡಿಸಿರುತ್ತೇನೆ.

ಆರ್.ಆರ್.**5** ಮತ್ತು **6** ನ್ನು ನೋಡಿರುತ್ತೇನೆ. ಪಹಣಿಯಲ್ಲಿ ಆದಿ ರೆಡ್ಡಿ ರವರ ಹೆಸರನ್ನು ತೆಗೆಯಬೇಕು ಎಂದು ನನ್ನ ತಂದೆ ತಿಳಿಯದ ಕಾರಣ ಅರ್ಜಿ ಕೊಟ್ಟಿರುವುದಿಲ್ಲ, ನಾನು **2001** ರಿಂದ ಕೊಟ್ಟಿರುತ್ತೇನೆ. ನಾನು ಡಿ.ಸಿ, ಎ.ಸಿ, ತಹಶೀಲ್ದಾರರಿಗೂ ಅರ್ಜಿ

ನೀಡಿರುತ್ತೇನೆ. ಈ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇನೆ. ಆದಿ ರೆಡ್ಡಿ ಗೂ ಹಾಗೂ ದಾವಾ ಸ್ವತ್ತಿಗೂ ಸಂಬಂಧ ಇಲ್ಲ ವಜೆ ಮಾಡಬೇಕು ಎಂದು ಅರ್ಜಿ ಕೊಟ್ಟಿರುತ್ತೇನೆ. ನಾನು ಅರ್ಜಿ ಕೊಟ್ಟ ನಂತರವೂ ತಹಶೀಲ್ದಾರರು ನಮ್ಮ ಗಮನಕ್ಕೆ ತರದೆ ಪವತಿ ಖಾತೆ ಮಾಡಿರುತ್ತಾರೆ. ನನಗೆ ಮಾಹಿತಿಯಂತೆ ಆದಿ ರೆಡ್ಡಿ ರವರು **1984** ರಲ್ಲಿ ತೀರಿಕೊಂಡಿರುತ್ತಾರೆ. ಆದಿ ರೆಡ್ಡಿ ರವರು ಮೊದಲು ತೀರಿಕೊಂಡಿರುತ್ತಾರೆ. ನಾರಾಯಣ ರೆಡ್ಡಿ **2009** ರಲ್ಲಿ ತೀರಿಕೊಂಡಿರುತ್ತಾರೆ. ಅವರು ತೀರಿಕೊಂಡ ನಂತರವೂ ಆದಿ ರೆಡ್ಡಿ ರವರ ಹೆಸರು ಪಹಣಿಯಲ್ಲಿ ಬರುತ್ತಿದೆ ಎಂದರೆ ಸರಿ. ಆದಿ ರೆಡ್ಡಿ ರವರು ಸ್ವಾಧೀನದಲ್ಲಿ ಇದ್ದು ತೀರಿಕೊಂಡ ನಂತರ ನಾರಾಯಣ ರೆಡ್ಡಿ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿಯಲ್ಲ, ನಾವೇ ಇದ್ದೆವೆ. ಈಗ ದಾವಾ ಸ್ವತ್ತಿಗೆ ಪ್ರತಿವಾದಿಗಳು ಹಕ್ಕುದಾರರು ಎಂದರೆ ಸರಿಯಲ್ಲ. ಅವರ ಹೆಸರಿಗೆ ಫವತಿ ಖಾತೆ ಆಗಿರುತ್ತದೆ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖಾನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಪಾವಗಡ.

ಸಾಕ್ಷಿ ಸಹಿಃ